ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಬರುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ. ಆದರೂ ಕೆಲವರು ಸಿಕ್ಕಾಪಟ್ಟೆ ಗಳಿಸುವರಲ್ಲಾ, ಇವರಿಗೆ ಅದರ ಚಿಂತೆ ಇಲ್ವಾ?*



ಬಂದಾಗ ಅಮ್ಮ ಬೆಚ್ಚಗಿಡುತ್ತಾಳೆ, ಹೋದಾಗ ಸುಡುಸುಡು ಬಿಸಿ. ಇದ್ದಷ್ಟು ಕಾಲ ತಾನೇ ಬೆಚ್ಚಗಿರಬೇಕಾದ್ದರಿಂದ ಈ ಪರಿ!

ಮಾಗಡಿ ಶ್ರೀನಿವಾಸ್, ಬಾಳೆಕಟ್ಟೆ
*ಮದುವೆ ಎಂಬುದು ಬಂಧವೋ, ಚಂದವೋ ಸಾರ್?*
ಬಡವರ ಮನೆಯ ಹೆಣ್ಣಾದರೆ ಚಂದಾ ಎತ್ತಿ ಮಾಡಿದ ಬಂಧ!

ಕಾವ್ಯ ಶ್ರೀಲಕ್ಷ್ಮಿ, ಕತ್ರಗುಪ್ಪ
*ಅಪ್ಪ ವೈದ್ಯನಾಗು ಅಂತಾರೆ, ಅಮ್ಮ ಎಂಜಿನಿಯರ್ ಆಗು ಅಂತಾಳೆ; ಯಾರ ಪರ ಮತ ಹಾಕಲಿ?*
ಇಬ್ಬರ ಪರವೂ ಹಾಕಬಹುದಲ್ಲಾ – ಬಯೋಟೆಕ್ನಾಲಜಿ ಓದಿಬಿಡಿ!

ಅಕ್ಷಯ ಜೈನ್, ಹೂವಿನಹಡಗಲಿ
*ಹೃದಯದ ಬಾಗಿಲನ್ನು ಸಂತೋಷದಿಂದ ಹೇಗೆ ತೆರೆಯಬೇಕು ಸಾರ್?*




ಎಡ ಹೃತ್ಕುಕ್ಷಿ, ಬಲ ಹೃತ್ಕುಕ್ಷಿ, ಎಡ ಹೃತ್ಕರಣ, ಬಲ ಹೃತ್ಕರಣ, ಶ್ವಾಸಕೋಶಗಳು, ನರಗಳು, ಧಮನಿಗಳಿಗೆ ನೋವಾಗದಂತೆ!

ಪಿ.ಜೆ.ರಾಘವೇಂದ್ರ, ಮೈಸೂರು
*ಘಟಂಗನ ಕೊನೆಯ ಆಸರೆಯೇ ರಾಜಕೀಯ. ರಾಜಕಾರಣಿಯ ಪೂರ್ವಾಶ್ರಮ..?*
ಅಡ್ಡಾಗಳಲ್ಲಿ ಅಡ್ಡಾದಿಡ್ಡಿ ಜೀವನ!

ಸುಧಾರಾಜ್, ಮೈಸೂರು
*ಹೊಸದಾಗಿ ಮದುವೆಯಾದವರು ಎಂದರೆ ಏನರ್ಥ?*
ಇನ್ನೂ war, sick, oath ಸವ (ವಾರ್ಷಿಕೋತ್ಸವ) ಕಾಣದವರೆಂದು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಗಂಡು ಹೆಣ್ಣನ್ನು ನೋಡಿ ಮೀಸೆ ತಿರುವುತ್ತಾನೆ, ಹೆಣ್ಣು?*
ಅದೇ ಗಂಡಿನ ಕೈಲಿ ಹಿಟ್ಟು ತಿರುವಿಸುತ್ತಾಳೆ!

ಎಸ್.ಜಿ. ರಾಜಶೇಖರ ರೆಡ್ಡಿ, ಗೌರಿಬಿದನೂರು
*ದೇವರು ಕೊಟ್ಟಿದ್ದು ಕೊನೆ ತನಕ, ಮನುಷ್ಯ ಕೊಟ್ಟಿದ್ದು ಮನೆ ತನಕ, ಏನನ್ನ ಸಾರ್?*
ಕಾಲು, ಚಪ್ಪಲಿ!

ಗು. ರಘುನಂದನ,ಮಂಡ್ಯ
*ಇಲ್ಲೊಬ್ಬರು ರೇಖಾ ಫ್ಯಾನ್ಸಿ ಸ್ಟೋರ್ಸ್ ಎಂದು ಬರೆಸಿದ್ದಾರೆ. ಕನ್ನಡದ ಉದ್ಧಾರಕ್ಕೆ ಕೇವಲ ಕನ್ನಡದ ಅಕ್ಷರಗಳಿದ್ದರೆ ಸಾಕೆ?*
ಗೆರೆ ಕಲ್ಪನೆ ಅಂಗಡಿಗಳು ಎಂದು ಅನುವಾದಿಸುವುದಕ್ಕಿಂತಲೂ ಇದೇ ವಾಸಿ!

ಮಹಾವೀರ ಕಾಸರ, ಚನ್ನಗಿರಿ
*ನ್ಯಾಯದೇವತೆಯ ಕಣ್ಣಿಗೆ ಕಟ್ಟಿರುವ ಪಟ್ಟಿ ಕಪ್ಪು ಏಕೆ?*
ಅದು ದುರುಳ ನ್ಯಾಯವಾದಿಗಳ, ನ್ಯಾಯಾಧೀಶರ ಪ್ರಖರತೆ ಕಣ್ಣು ಕುಕ್ಕದಂತೆ ತಡೆಯುವ ಕೂಲಿಂಗ್ ಕ್ಲಾತ್!

ಮಂಜು, ಹಗರಿಬೊಮ್ಮನಹಳ್ಳಿ
*ಸ್ವಿಮಿಂಗ್ ಪೂಲ್‌ಗಳನ್ನು ನಿರ್ಮಾಣ ಮಾಡಿದ ಹಾಗೆ ಕೆರೆಗಳನ್ನು ಏಕೆ ನಿರ್ಮಾಣ ಮಾಡುತ್ತಿಲ್ಲ?*
ಕೆರೆಗಳನ್ನೇ ಚಿಕ್ಕದಾಗಿಸಿ ಸ್ವಿಮಿಂಗ್ ಪೂಲ್‌ನ ಸೈಜ್‌ಗೆ ತರುವ ಯೋಜನೆ ಇದೆಯಂತೆ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಸರಹದ್ದು ಕಾಯುವವನಿಗೂ, ಸ್ಮಶಾನ ಕಾಯುವವನಿಗೂ ಏನು ವ್ಯತ್ಯಾಸ?*
ಸರಹದ್ದು ಕಾಯುವವನು ಎರಡೂ ಕಡೆ ಕಣ್ಣಿಟ್ಟಿರಬೇಕು!

ಪ್ರಮೋದ ಕುಮಾರ ಪಿ.ಹೆಚ್, ಕೂಕನೂರ
*ಹುಡುಗಿಯ ನಗೆ ಹುಡುಗನಿಗೆ ಹೊಗೆ; ಹುಡುಗನ ನಗೆ ಹುಡುಗಿಗೆ...?*
ಬಕರಾ ಸಿಕ್ಕಿದನೆಂದು ಒಳಗೊಳಗೇ ನಗೆಯೋ ನಗೆ!

## ಬಹುಮಾನಿತ ಪ್ರಶ್ನೆ

ನಾರಾಯಣ, ಗುಗ್ಗರಹಟ್ಟಿ
*ಪಂಚಕನ್ಯೆಯರಲ್ಲಿ ದ್ರೌಪದಿ ಮತ್ತು ಮಂಡೋದರಿಯ ಹೆಸರನ್ನು ಯಾರೂ ಇಡುವುದಿಲ್ಲವಲ್ಲಾ, ಏನು ಕಾರಣ?*
ಹತ್ತು ತಲೆಯವನೋ, ಐದು ಗಂಡಂದಿರೋ ಗಂಟುಬಿದ್ದಾರೆಂಬ ಭಯ!

ಕೇಶವ ಎನ್. ಪೈ, ಕಾಸರಕೋಡ
*ಮಗುವಿಗೆ ಜೋಗುಳವಾದರೆ ಮಹಿಳೆಗೆ?*
ಮೆಟರ್ನಿಟಿ ಲೀವ್!

ಗಾಯತ್ರಿ, ರಾಜಾಜಿನಗರ
*ಬುದ್ಧಿವಂತನಿಗೆ ಹಣದ ಕೊರತೆ ಎಂದೂ ಬಾರದು; ದಡ್ಡನಿಗೆ...?*
ಹಣದ ಒರತೆ ಎಂದೂ ಕಾಣದು!

ಹಾಡ್ಯ ಬಿ. ಜಯಾನಂದ, ಮೈಸೂರು
*ಬರುವಾಗ ಬರೀ ಕೈ, ಹೋಗುವಾಗ ಬರೀ ಕೈ. ಇಲ್ಲಿರುವಾಗ...?*
ಕಾಟ ಕೊಡಲು ಭಾಜಪ, ಜೆಡಿಎಸ್, ಕಾಂಗ್ರೆ!

ಗೀತಾ ಬರ್ಲ, ಬೆಂಗಳೂರು
ಹೆಣ್ಣನ್ನು ಹಣ್ಣಿಗೆ ಹೋಲಿಸುತ್ತಾರಲ್ಲಾ, ಯಾಕೆ?



ಹಲಸಿನಹಣ್ಣಿಗಂತೂ ಸರಿಯೇ ಸರಿ; ಒರಟು, ಗೋಜಲು, ಮೃದು, ಸಿಹಿ, ಅಂಟು, ಸುಗಂಧದ ಮಿಶ್ರ ವ್ಯಕ್ತಿತ್ವವೇ ಹೆಣ್ಣು!

ರವಿ ಭಟ್, ಬೆಂಗಳೂರು
*ಗೋಹತ್ಯೆ ನಿಷೇಧ ಆದ್ರೆ ಎಮ್ಮೆ ಹತ್ಯೆ?*
ಎಮ್ಮೆಯ ತಾಯಿಯು ಮಹಿಷನ ಕೊಂದಳು, ಮಹಿಷಿಯ ಕಥೆ ನಾವ್ ಮುಗಿಸುವೆವು ಎಂದನಾ ಚಾಮುಂಡಿ ಭಕ್ತ!

ವಿ.ಹಮೀದ್, ವಿಟ್ಲ
*ರಾತ್ರಿ ಕನಸಿಗೂ ಹಗಲುಗನಸಿಗೂ ಇರುವ ವ್ಯತ್ಯಾಸವೇನು?*
ಡೇ ಷಿಫ್ಟ್‌ನವರದು ರಾತ್ರಿ ಕನಸು, ನೈಟ್ ಷಿಫ್ಟ್‌ನವರದು ಹಗಲುಗನಸು!

■ ರಾಮ್